ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂ: ಡಿಸಿಇ/ಟಿಆರ್‌ಎನ್/5/2022-ಟಿಡಿಜಿ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು. ದಿನಾಂಕ: 13.04.2022.

**ಅಧಿಸೂಚನೆ**

ವಿಷಯ: 2022ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಸಾರ್ವಜನಿಕ ಹಿತಾಸಕ್ತಿಯ ಹಾಗೂ ವಿಶೇಷ ಪ್ರಕರಣಗಳ ಬೋಧಕರ ವರ್ಗಾವಣೆ ಸಂಬಂಧ ವರ್ಗಾವಣಾ ಆದ್ಯತಾ ಪಟ್ಟಿಗಳನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 151 ಡಿಸಿಇ 2020 ದಿನಾಂಕ:29.01.2021 ರಂತೆ ಅಧಿಸೂಚಿಸಲಾದ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಮಗಳು-2021.
2. ಸರ್ಕಾರದ ತಿದ್ದುಪಡಿ ಅಧಿಸೂಚನೆ ಸಂಖ್ಯೆ:ಇಡಿ 151 ಡಿಸಿಇ 2020 ದಿನಾಂಕ:29.06.2021.
3. ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 23378/2021ಕ್ಕೆ ದಿನಾಂಕ:17-01-2022ರಂದು ನೀಡಿರುವ ಮಧ್ಯಂತರ ಆದೇಶ.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 77 ಡಿಸಿಇ 2022 (ಇ ಕಡತ) ದಿನಾಂಕ:14-03-2022.
5. ಈ ಕಛೇರಿ ಸಮ ಸಂಖ್ಯೆಯ ದಿನಾಂಕ: 04-04-2022ರ ಸುತ್ತೋಲೆ.
6. ಈ ಕಛೇರಿ ಸಮ ಸಂಖ್ಯೆಯ ದಿನಾಂಕ:04-04-2022ರ ಅಧಿಸೂಚನೆ

** ** **

ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆಯನ್ನು ಪ್ರಸಕ್ತ ಸಾಲಿಗೆ ಅನ್ವಯಿಸುವಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು ಹಾಗೂ ತಿದ್ದುಪಡಿ ನಿಯಮಗಳು 2021ರಲ್ಲಿ ತಿಳಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಕೌನ್ಸಿಲಿಂಗ್ ಮೂಲಕ ಮಾರ್ಚ್ ಮತ್ತು ಏಪ್ರಿಲ್ - 2022ರ ನಡುವೆ ವರ್ಗಾವಣೆ ನಡೆಸಲು ಅನುಮತಿ ನೀಡಿರುತ್ತದೆ. ಸರ್ಕಾರವು ನೀಡಿರುವ ಅನುಮತಿಯಂತೆ ವರ್ಗಾವಣೆ ಪ್ರಕ್ರಿಯೆಯನ್ನು ಕೈಗೊಳ್ಳುವ ಸಲುವಾಗಿ ಉಲ್ಲೇಖ(5) ರಂತೆ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗೆ ಅರ್ಹರಾಗುವ ಬೋಧಕರ ಪಟ್ಟಿಯನ್ನು ಪ್ರಕಟಿಸಿ ವ್ಯತ್ಯಾಸಗಳಿದ್ದಲ್ಲಿ ದಿನಾಂಕ:08-04-2022ರ ಒಳಗಾಗಿ dce.transfer2022@gmail.com ವಿಳಾಸಕ್ಕೆ ಸಲ್ಲಿಸುವಂತೆ ಹಾಗೂ ಉಲ್ಲೇಖ(6) ರಂತೆ ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ online ಮೂಲಕ ಅರ್ಜಿ ಸಲ್ಲಿಸಲು ಸೂಚಿಸಲಾಗಿತ್ತು.

ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಸ್ವೀಕೃತವಾದ ವಿಶೇಷ ಪ್ರಕ್ರರಣಗಳಡಿ ಕೋರಿಕೆ ವರ್ಗಾವಣೆಯ ಅರ್ಜಿಗಳನ್ನು, ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಯಿಂದ ವಿನಾಯಿತಿಗಾಗಿ ಸಲ್ಲಿಸಲಾದ ಮನವಿ ಹಾಗೂ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗೆ ಅರ್ಹರಾಗುವ ಬೋಧಕರ ಪಟ್ಟಿಗೆ ಸಂಬಂಧಿಸಿದಂತೆ ಸ್ವೀಕೃತವಾದ ತಿದ್ದುಪಡಿ ಮನವಿಗಳನ್ನು ಜಾರಿಯಲ್ಲಿರುವ ವರ್ಗಾವಣೆ ನಿಯಮಗಳನ್ವಯ ಪರಿಶೀಲಿಸಿ ಆದ್ಯತಾ ಪಟ್ಟಿಗಳನ್ನು ತಯಾರಿಸಲಾಗಿದೆ.

.....2

ಆನ್‌ಲೈನ್ ಮೂಲಕ ಸಲ್ಲಿಸಲಾದ ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಯ ಮನವಿಗಳಲ್ಲಿ ವರ್ಗಾವಣೆಗೆ ಅರ್ಹರಾಗುವ ಬೋಧಕರ ವಲಯವಾರು ಮತ್ತು ವರ್ಗವಾರು ತಾತ್ಕಾಲಿಕ ಆದ್ಯತಾ ಪಟ್ಟಿಯನ್ನು ಕೆಳಕಂಡಂತೆ ಅನುಬಂಧ-01 (ಎ) ಮತ್ತು 01(ಬಿ) ರಲ್ಲಿ ನೀಡಲಾಗಿದೆ.

**1) ಅನುಬಂಧ-01(ಎ):ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ವಲಯ ಮತ್ತು ವರ್ಗವಾರು ಪಟ್ಟಿ.**

**2) ಅನುಬಂಧ-01(ಬಿ): ಉಳಿಕೆ ಮೂಲ ವೃಂದದ ವಲಯ ಮತ್ತು ವರ್ಗವಾರು ಪಟ್ಟಿ**

ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗೆ ಅರ್ಹರಾಗುವ ಬೋಧಕರ ವಲಯವಾರು ಮತ್ತು ವರ್ಗವಾರು ತಾತ್ಕಾಲಿಕ ಆದ್ಯತಾ ಪಟ್ಟಿಯನ್ನು ಕೆಳಕಂಡಂತೆ ಅನುಬಂಧ-02(ಎ) ಮತ್ತು 02(ಬಿ) ರಲ್ಲಿ ನೀಡಲಾಗಿದೆ.

**1) ಅನುಬಂಧ-02(ಎ):ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ವಲಯ ಮತ್ತು ವರ್ಗವಾರು ಪಟ್ಟಿ.**

**2) ಅನುಬಂಧ-02(ಬಿ): ಉಳಿಕೆ ಮೂಲ ವೃಂದದ ವಲಯ ಮತ್ತು ವರ್ಗವಾರು ಪಟ್ಟಿ**

ವಿಶೇಷ ಪ್ರಕರಣಗಳಡಿ Serious Ailments, Spouse Cases ಮತ್ತು Cases of Widow/Single Parents ಪ್ರಕರಣಗಳಡಿ ಸಲ್ಲಿಸಿದ್ದ ಕೋರಿಕೆಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಆದ್ಯತಾ ಪಟ್ಟಿಯಲ್ಲಿನ ಈ ಕೆಳಕಂಡ ಕ್ರಮ ಸಂಖ್ಯೆಗಳಲ್ಲಿನ ಬೋಧಕರು ಅಗತ್ಯ ಮಾಹಿತಿಯನ್ನು {**(HRMS Pay Slip of Spouse duly attested by respective Drawing Officer wrt Spouse Cases), (Medical certificate issued by District Medical Board and duly signed by Members and Chairman wrt Serious Ailment Cases) and (Affidavit for having not Remarried wrt Widow/ Woman Divorcee/Single Parent Cases)**} ದಿನಾಂಕ:18-04-2022 ರ ಒಳಗಾಗಿ dce.transfer2022@gmail.com ವಿಳಾಸಕ್ಕೆ ಇಮೇಲ್ ಮೂಲಕ ಸಲ್ಲಿಸುವ ಷರತ್ತಿಗೊಳಪಟ್ಟು ತಾತ್ಕಾಲಿಕ ಆದ್ಯತಾ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿದೆ. ದಿನಾಂಕ:18-04-2022ರ ಒಳಗಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸದ ಬೋಧಕರ ಹೆಸರುಗಳನ್ನು ಅಂತಿಮ ಆದ್ಯತಾ ಪಟ್ಟಿಯಿಂದ ಕೈಬಿಡಲಾಗುವುದು.

| Sl. No. | Zone | ವಿಶೇಷ ಪ್ರಕರಣಗಳ ತಾತ್ಕಾಲಿಕ ವರ್ಗಾವಣಾ ಆದ್ಯತಾ ಪಟ್ಟಿಯ ಕ್ರಮ ಸಂಖ್ಯೆ | | |
|---|---|---|---|---|
| | | **Spouse Case** (HRMS Pay Slip of Spouse duly attested by respective drawing officer) | **Serious Ailments** (Medical certificate issued by District Medical Board and duly signed by members and chairman) | **Widow / Women Divorcee/Single parent** (Affidavit for having not remarried) |
| 1 | A | RoK:10. | RoK: 3. | |
| 2 | B | RoK:13,30,32,35.<br>K-K: 3. | RoK:1,5,6,7,8,12. | RoK: 2 |
| 3 | C | RoK:114,152.<br>K-K: 5. | RoK:13,22,27,39,43.<br>K-K: 2. | RoK: 9, |
| 4 | D | RoK:183,189,196,204,211,226,231, 243,277,296,313, 330.<br>K-K: 22,30,33,37,48. | RoK: 9,63,70,71,91.<br>K-K : 5,11. | RoK: 19 |
| 5 | E | RoK:412,413,416,437,484,408,506.<br>K-K: 64. | RoK:12,98,102,103,109. | |

.....3

ವಿಶೇಷ ಪ್ರಕರಣಗಳಡಿಯ ಕೋರಿಕೆ ವರ್ಗಾವಣೆ ಮತ್ತು ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಯ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ಹಾಗೂ ವ್ಯತ್ಯಾಸಗಳಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಮನವಿಯನ್ನು ದಿನಾಂಕ:18-04-2022ರ ಒಳಗಾಗಿ dce.transfer2022@gmail.com ವಿಳಾಸಕ್ಕೆ ಇಮೇಲ್ ಮೂಲಕ ಸಲ್ಲಿಸುವಂತೆ ಸೂಚಿಸಿದೆ. ಭೌತಿಕವಾಗಿ ಸಲ್ಲಿಸುವ ಮತ್ತು ಕೊನೆಯ ದಿನಾಂಕದ ನಂತರ ಸಲ್ಲಿಸುವ ಹಾಗೂ ಅಪೂರ್ಣ ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲ.

**ವರ್ಗಾವಣೆಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಕಾಲಕಾಲಕ್ಕೆ ಇಲಾಖಾ ವೆಬ್‌ಸೈಟ್‌ನ ಬೋಧಕರ ವರ್ಗಾವಣೆ – 2022 Web page ನಲ್ಲಿ ಪ್ರಕಟಿಸಲಾಗುವುದು. ಸಂಬಂಧಿಸಿದವರು ಇಲಾಖಾ ವೆಬ್‌ಸೈಟ್ ಅನ್ನು ಗಮನಿಸುವುದು.**

**(ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

13/04/2022

**ಮುಖ್ಯ ಆಡಳಿತಾಧಿಕಾರಿಗಳು**
**ಕಾಲೇಜು ಶಿಕ್ಷಣ ಇಲಾಖೆ**

**ಪ್ರತಿಯನ್ನು:**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಬೋಧಕರುಗಳಿಗೆ -ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಹಾಗೂ ಕಲಬುರಗಿ-ಮಾಹಿತಿಗಾಗಿ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ರಕ್ಷಾ ಕಡತ.
5. ಕಛೇರಿ ಪ್ರತಿ.